<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು</u>

<u>ಸೆಷನ್ಸ್ ಕೇಸ್ ನಂಬ್ರ 34/2020</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಶಾಲಿನಿ ಶೆಟ್ಟಿ | <u>ಪ್ರಾ.ಸಾಃ 39</u> |
| ಗಂಡನ ಹೆಸರು | : | ಶ್ರೀಧರ ಶೆಟ್ಟಿ | <u>ಚಾ.ಸಾಃ 50</u> |
| ಪ್ರಾಯ | : | 65 ವರ್ಷ | ದಿನಾಂಕಃ 20.06.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | Retd. D.G.M., Vijaya Bank | |
| ವಾಸಸ್ಥಳ | | ಕದ್ರಿ, ಮಂಗಳೂರು. | |

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

ನಾನು 2007 ರಿಂದ 2010 ರವರೆಗೆ ವಿಜಯಾ ಬ್ಯಾಂಕ್ ಜೆಪ್ಪು ಬ್ರಾಂಚ್, ಮಂಗಳೂರಿನಲ್ಲಿ ಶಾಖಾ ವ್ಯವಸ್ಥಪಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಆ ಸಮಯದಲ್ಲಿ ಉಳ್ಳಾಲ ಪೊಲೀಸ್ ಉಪ ನಿರೀಕ್ಷಕರು ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದ ಸಮ್ರೀನಾರವರ ಉಳಿತಾಯ ಖಾತೆಗೆ ಸಂಬಂಧಪಟ್ಟಂತೆ ಮೂರು ಪತ್ರಗಳನ್ನು ದಿನಾಂಕಃ 04.12.2008 ರಂದು ಬರೆದಿದ್ದು ಅವುಗಳನ್ನು ಗುರುತಿಸುತ್ತೇನೆ. ಸದರಿ ಪತ್ರಗಳನ್ನು ಮೂಲ ಪ್ರಕರಣದಲ್ಲಿ ನಿ.ಪಿ.58 ರಿಂದ ನಿ.ಪಿ.60 ಎಂದು ಗುರುತಿಸಲಾಗಿದ್ದು, ಅವುಗಳನ್ನು ಈಗ ನಿ.ಪಿ.51 ರಿಂದ ನಿ.ಪಿ.53 ಎಂದು ಗುರುತಿಸಲಾಯಿತು. ಅದರ ಪ್ರಕಾರ ನಾನು ಭಾರತ್ ಎಂಟರ್ ಪ್ರೈಸಸ್ ನ ಮಾಲೀಕ ಸೈಯದ್ ಮಹಮ್ಮದ್ ನೌಶಾದ್ ನ ಖಾತೆ ಬಗ್ಗೆ ಪತ್ರ ಬರೆದಿದ್ದು ಸ್ಟೇಟ್ ಮೆಂಟ್ ಎಕ್ಸ್ಟ್ರಾಕ್ಟನ್ನು ಕಳಿಸಿದ್ದು ಅದನ್ನು ಮೂಲ ಪ್ರಕರಣದಲ್ಲಿ ನಿಶಾನೆ ಪಿ 61 ಎಂದು ಗುರುತಿಸಲಾಗಿದ್ದು, ಈಗ ನಿ.ಪಿ.54 ಎಂದು ಗುರುತಿಸಲಾಯಿತು. ದಿಲ್ಶಾದ್ ಬೇಗಂ ಎಂಬುವವರು ಖಾತೆಗೆ ಸಂಬಂಧಪಟ್ಟಂತೆ ಪತ್ರ ಮತ್ತು ಸ್ಟೆಂಟ್ ಮೆಂಟ್ ಆಫ್

ಅಕೌಂಟ್ಸ್ ಎಕ್ಸ್ ಟ್ರ್ಯಾಕ್ಟನ್ನು ಕಳಿಸಿದ್ದು ಅದನ್ನು ಮೂಲ ಪ್ರಕರಣದಲ್ಲಿ ನಿಶಾನೆ ಪಿ - 62 ಎಂದು ಮತ್ತು ನಮ್ರಿನ್ ಎಂಬುವವರ ಖಾತೆಗೆ ಸಂಬಂಧಪಟ್ಟಂತೆ ಪತ್ರ ಮತ್ತು ಅಕೌಂಟ್ಸ್ ಎಕ್ಸ್ ಟ್ರ್ಯಾಕ್ಟನ್ನು ಕಳಿಸಿದ್ದು ಅದನ್ನು ನಿಶಾನೆ ಪಿ.63 ಎಂದು ಗುರುತಿಸಲಾಗಿದ್ದು, ಅವುಗಳನ್ನು ಈಗ ನಿ.ಪಿ.55 ಮತ್ತು ನಿ.ಪಿ.56 ಎಂದು ಗುರುತಿಸಲಾಯಿತು. ನಿ.ಪಿ.54 ರಿಂದ ನಿ.ಪಿ.56 ರಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ 54(ಎ) ಯಿಂದ ನಿಶಾನೆ ಪಿ-56(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 10 ನೇ ಆರೋಪಿಯ ಪರ ಶ್ರೀ ಎಸ್.ಆರ್.ಎಫ್. ವಕೀಲರಿಂದಃ-**

ಪಾಟೀ ಸವಾಲು ಏನು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.